ಪ್ರಬಂಧ

# ರಾತ್ರಿ ಪಾಳಿಯ ಚಾಲಕರು



ಯೋಗೀಂದ್ರ ಮರವಂತೆ

ಕಲೆ: ಗುಜ್ಜಾರ್



'ಕನಸೆಂದರೆ ನಿದ್ರೆಯಲ್ಲಿ ನೋಡುವಂತಹದ್ದಲ್ಲ; ನಿದ್ರೆ ಮಾಡಲು ಬಿಡದ್ದು' ಎನ್ನುತ್ತ ನಿದ್ದೆಗೆಡಿಸಿದವರು ಅಬ್ದುಲ್ ಕಲಾಂ. ಮುಖ್ಯವಾಗಿ ಅವರನ್ನು ಕೇಳಲು ಇಷ್ಟ ಪಡುತ್ತಿದ್ದ ವಿದ್ಯಾರ್ಥಿಗಳದ್ದು. ಈ ಕನಸು ಸೊಂಪಾದ ನಿದ್ದೆಯ ನಡುವಿನ ಸುಸ್ವಪ್ನವಲ್ಲ. ಬೆವರಿ ಬೆಚ್ಚುವ ದುಸ್ವಪ್ನವೂ ಅಲ್ಲ. ಒಡಲಿನೊಳಗೆ ಸಣ್ಣದಾಗಿ ಹುಟ್ಟಿ ನಿತ್ಯವೂ ಬೇರೆಬೇರೆ ಆಕಾರ ತಾಳಿ ದೊಡ್ಡದಾಗಿ ಜ್ವಲಿಸಿ, ಮೈಮನಗಳನ್ನು ವ್ಯಾಪಿಸಿ ಮುನ್ನಡೆಸುವ ಸ್ವಯಂಸ್ಫೂರ್ತಿ. ನೆಲೆ ಮುಟ್ಟುವ ತನಕ ನಿಲ್ಲದ ನಡಿಗೆ, ಗಮ್ಯದ ಕಡೆಗಿನ ಅವಿರತ ನಿರಂತರ ಓಟ. ಕನಸಿನ ಒಂದು ವ್ಯಾಖ್ಯಾನ ಹೀಗಾದರೆ, ಕಾವ್ಯ, ಸಾಹಿತ್ಯಗಳು ಕನಸನ್ನು ಕೆಲವೊಮ್ಮೆ ಬರೇ ಕನಸೆಂದು ಸಾಮಾನ್ಯವಾಗಿ ನೋಡಬಹುದು. ನಿದ್ದೆಯನ್ನು ಕನಸೆಂದೋ ಕನಸನ್ನು ನಿದ್ದೆಯೆಂದೋ ಅಥವಾ ಬದುಕನ್ನೇ ಕನಸು ಎಂದೋ ಕಲ್ಪಿಸಲು ಪ್ರೇರೇಪಿಸಬಹುದು. ಕನಸೇ ಬದುಕಾಗುವುದರ ಬಗ್ಗೆ ಎಚ್ಚರಿಸಬಹುದು. ಕನಸಿನ ರಮ್ಯತೆಯನ್ನು ನಿಗೂಢತೆಯನ್ನು ಅಲ್ಲದಿದ್ದರೆ ವಿಹ್ವಲತೆಯನ್ನೂ ಶಬ್ದಚಿತ್ರವಾಗಿ ವರ್ಣಿಸಬಹುದು.

ಒಳ್ಳೆಯ ಕನಸು, ಕೆಟ್ಟ ಕನಸು ಎಂದು ಕರೆಯಲು ಅಲ್ಲದಿದ್ದರೆ ಮರೆಯಲು ಹೇಳಿಕೊಡಬಹುದು. ಅದು ಕಾವ್ಯದ ದೃಷ್ಟಿ, ಕವಿ ಕಲಾವಿದರ ಕಲ್ಪನೆಯ ಸೃಷ್ಟಿ. ಆದರೆ ಕಲಾಂ ಅವರು ಹೇಳಿದ್ದು ಕನಸಿನ ಬೆನ್ನು ಹಿಡಿದವರು ವಿರಮಿಸುವುದಿಲ್ಲ ಎಂದು. ಇದು ನಿಶ್ಚಿಂತರಾಗಿರಲು ಬಿಡದ ಚಡಪಡಿಕೆ. ಲಕ್ಷ್ಯ ತಲುಪುವ ತನಕವೂ ದೂಡಿದೂಡಿ ಓಡಿಸುವ ತಹತಹಿಕೆ. ನಿದ್ದೆಯೊಳಗಿನ ಎಚ್ಚರ.

ಎಚ್ಚರದಮೂಲಭೂತಗುಣವೇಆಯಾವ್ಯಕ್ತಿಯನ್ನುಏಳಿಸುವುದುಅಥವಾನಿದ್ದೆಮಾಡಿಲ್ಲಎಂದು ಉಳಿದವರಿಗೂ ತಿಳಿಸುವುದು. ಹಾಗಂತ ಒಬ್ಬರ ಎಚ್ಚರ ಇನ್ನೊಬ್ಬರ ನಿದ್ದೆಗೆಡಿಸುವುದಿಲ್ಲವೆಂದಲ್ಲ; ರಾತ್ರಿ ಮನೆಯನ್ನು ಮುರಿಯುವ ಕಳ್ಳರಿಗೂ ಒಂದು ಎಚ್ಚರ ಇರುತ್ತದೆ. ಮಲಗಬೇಕಾದವರು ಮಲಗುವುದನ್ನೇ ಕಾದು ತಮಗೆ ಬೇಕಾದ ಕೆಲಸ ಮುಗಿಸಿಕೊಳ್ಳುವ ಅಪರಾಧದ ಜಗತ್ತಿನ ಸಂಚಿನ ಎಚ್ಚರ. ಇನ್ನು ತಮಗಾಗುವ ಇಂತಹ ಅಥವಾ ಇನ್ಯಾವುದೋ ಹಾನಿ, ಸದ್ಯದಲ್ಲೇ ಎರಗಬಹುದಾದ ಆಪತ್ತಿನ ನಿರೀಕ್ಷೆಯಲ್ಲಿ ಇರುವವರು ತಳಮಳದಿಂದಲೇ ನಿದ್ದೆಗೆಡುವುದೂ ಇದೆಯಲ್ಲ. ಇವೆಲ್ಲ ಬಹುಶಃ ನಿದ್ದೆಯ ಹೊರಸುತ್ತಿನ ಬಹಿರಂಗದ ಎಚ್ಚರಗಳು. ನೇರಾನೇರ ನಿದ್ದೆ ಹಾಗೂ ಎಚ್ಚರ ಎನ್ನುವ ಶಬ್ದಾರ್ಥಗಳಿಗೆ ಸಂಬಂಧಿಸಿದ್ದು. ಆದರೆ ನಿದ್ದೆಯೊಳಗಿನ ಎಚ್ಚರ ಭಾವಾರ್ಥದಲ್ಲಿ ಆಂತರಂಗಿಕವಾದದ್ದು, ಕಣ್ಣು ಮುಚ್ಚಿದ್ದರೂ ಸುಪ್ತವಾಗಿ ಆರದೆ ಉರಿಯುತ್ತಲೇ ಇರುವಂತಹದ್ದು.